ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ

ಬೆಂಗಳೂರು

ವಜ್ರ ಮಹೋತ್ಸವ ದಿನಾಚರಣೆ.

ದಿನಾಂಕ : ೨೮-೧೨-೨೦೧೮

ಕರ್ನಾಟಕ ಜನತೆಯ ಬಾಯಿ ಮತ್ತು ದಂತ ಆರೋಗ್ಯದ ಬೇಡಿಕೆಗಳ ಅವಶ್ಯಕತೆ ಮತ್ತು ಆಧ್ಯತೆಯನ್ನು ಅರಿತ ರಾಜ್ಯ ಸರ್ಕಾರವು ೧೯೫೮ ರಲ್ಲಿ ಬೆಂಗಳೂರಿನ ಖ್ಯಾತ ವಿಕ್ಟೋರಿಯ ಆಸ್ಪತ್ರೆ ಆವರಣದಲ್ಲಿ ಸರ್ಕಾರಿ ದಂತ ಮಹಾ ವಿದ್ಯಾಲಯವನ್ನು ಸ್ಥಾಪಿಸಿತು. ಇದು ರಾಜ್ಯದ ಪ್ರಥಮ ದಂತ ವೈದ್ಯಕೀಯ ವಿದ್ಯಾಲಯ. ಇದು ಅಸ್ತಿತ್ವಕ್ಕೆ ಬಂದ ಕೆಲವು ವರ್ಷಗಳಲ್ಲಿ ಅಂದಿನ ಪ್ರಾಂಶುಪಾಲರಾದ ಹಾಗು ಕರ್ನಾಟಕ ದಂತ ವೈದ್ಯಕೀಯ ಶಾಸ್ತ್ರದ ಪಿತಾಮಹಾ ಎಂದು ಪ್ರಸಿದ್ಧರಾದ ಡಾ|| ಎಸ್. ರಾಮಚಂದ್ರ ಅವರ ದೂರದೃಷ್ಟಿ, ಆಸಕ್ತಿ ಮತ್ತು ನಿಸ್ವಾರ್ಥ ಸೇವೆಯ ಪರಿಣಾಮವಾಗಿ ದೇಶದ ಮಾದರಿ ದಂತ ವಿದ್ಯಾಲಯವಾಗಿ ಬೇಳೆಯಿತು. ಈ ಸಂಸ್ಥೆ ಅಂತರಾಷ್ಟ್ರೀಯ ಮಟ್ಟದಲ್ಲೂ ಹೆಸರು ಗಳಿಸಿ ಹಲವಾರು ದೇಶಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸಿತು.

೨೦೦೭ ರಾಜ್ಯ ಸರ್ಕಾರ ಇದನ್ನು ಉನ್ನತ್ತೀಕರಣಗೊಳಿಸಿ ಸ್ವಾಯತ್ತ್ ಸಂಸ್ಥೆ ಎಂದು ಘೋಷಿಸಿ, ಅದರ ಹೆಸರನ್ನು ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಎಂದು ಬದಲಾಯಿಸಿತು.

ಈ ಮಹಾವಿದ್ಯಾಲಯವು ರಾಜೀವ್ ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾಗಿದ್ದು ದಂತ ವೈದ್ಯಕೀಯ ಶಾಸ್ತ್ರದಲ್ಲಿ ಸ್ನಾತಕ ಪದವಿ BDS, ಸ್ನಾತಕೋತ್ತರ ಹುದ್ದೆ MDS ಮತ್ತು ಪಿ.ಹೆಚ್ ಡಿ ಕೋರ್ಸುಗಳನ್ನು ನಡೆಸುತ್ತಿದೆ. ಇದಲ್ಲದೆ ದಂತ ತಂತ್ರಜ್ಞ ಶಾಸ್ತ್ರ Dental Mechanic ಮತ್ತು ಬಾಯಿ ನೈರ್ಮಲ್ಯ ಶಾಸ್ತ್ರದಲ್ಲಿ Dental Hygienist ಸರ್ಟಿಫಿಕೇಟ್ ಕೋರ್ಸುಗಳನ್ನು ಸಹ ನಡೆಸುತ್ತಿದೆ. ಪ್ರತಿ ವರ್ಷ ಸ್ನಾತಕ ಪದವಿಗೆ ೬೦ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ಪದವಿಗೆ ೨೫ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆಯುತ್ತಾರೆ. ಇಲ್ಲಿಯವರೆಗೆ ಸುಮಾರು ೩೦೦೦ ಸ್ನಾತಕ ಪದವಿದರರು, ೬೦೦ ಸ್ನಾತಕೋತ್ತರ ಪದವಿದರರು, ೧೦ ಪಿ.ಹೆಚ್ ಡಿ ಪದವಿದರರು, ೧೦೦ ದಂತ ತಂತ್ರಜ್ಞ ಪದವಿದರರು ಮತ್ತು ೪೦ ಬಾಯಿ ನೈರ್ಮಲ್ಯ ಪದವಿದರರು ವಿದ್ಯಾಲಯದಿಂದ ತೇರ್ಗಡೆ ಹೊಂದಿದ್ದಾರೆ.

ಈ ಮಹಾವಿದ್ಯಾಲಯವು ಪ್ರತಿದಿನ ಸುಮಾರು ೩೦೦ಕ್ಕೂ ಹೆಚ್ಚು ಬಾಯಿ ಮತ್ತು ದಂತ ರೋಗಿಗಳಿಗೆ ವಿವಿಧ ಬಗೆಯ ಚಿಕಿತ್ಸೆಯನ್ನು ನೀಡುತ್ತಿದೆ. ಇದಲ್ಲದೆ ವಿದ್ಯಾಲಯವು ನಮ್ಮ ರಾಜ್ಯದ ಹಲವು ಗ್ರಾಮೀಣ ಪ್ರದೇಶದಲ್ಲಿ ಮತ್ತು ನಗರದ ಕೊಳಗೇರಿಗಳಲ್ಲಿ ಪ್ರತಿ ವಾರ ಉಚಿತ ದಂತ ಚಿಕಿತ್ಸಾ ಶಿಬಿರಗಳನ್ನು ನಡೆಸಿಕೊಂಡು ಬಂದಿದೆ. ಈ ಕಾರ್ಯಕ್ರಮಗಳು ಜನಸಾಮಾನ್ಯರಿಗೆ ವರಪ್ರಧಾನವಾಗಿದೆ.

ಈ ಮಹಾವಿದ್ಯಾಲಯದ ಪದವೀದರರು ರಾಜ್ಯ, ದೇಶ ಮತ್ತು ಪ್ರಪಂಚದ ನಾನಾ ಭಾಗಗಳಲ್ಲಿ ದಂತ ರೋಗ ಪೀಡಿತರಿಗೆ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಈ ವಿದ್ಯಾಲಯದ  ವಿದ್ಯಾರ್ಥಿಗಳಲ್ಲಿ ಭ್ರಾತೃತ್ವ ಭಾವವನ್ನು ಮತ್ತು ಮಾತೃ ಸಂಸ್ಥೆಯೊಂದಿಗೆ ನಿಕಟ ಸಂಬಂಧವನ್ನು ಏರ್ಪಡಿಸಲು ೧೯೯೯ರಲ್ಲಿ ಹಳೆಯ ವಿದ್ಯಾರ್ಥಿಯ  ಸಂಘವು ಸ್ಥಾಪಿಸಲಾಯಿತು. ಪ್ರಸ್ತುತ ಸುಮಾರು ೧೫೦೦ ಪದವೀದರರು ಈ ಸಂಘದ ಸದಸ್ಯರಾಗಿರುತ್ತಾರೆ. ಹಳೆ ವಿದ್ಯಾರ್ಥಿ ಸಂಘವು ಲೋಕ ಕಲ್ಯಾಣಕ್ಕಾಗಿ ಹಾಗೂ ಮಾತೃ ಸಂಸ್ಥೆಯ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

- ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರಧಾನ ಮಾಡುವುದು
- ಬಡ ವಿದ್ಯಾರ್ಥಿಗಳಿಗಾಗಿ ಆರ್ಥಿಕ ಸಹಾಯ ಮತ್ತು ವಿದ್ಯಾರ್ಥಿ ವೇತನವನ್ನು ನೀಡುವುದು, ಅವಶ್ಯವಾದ ದಂತ ಸಲಕರಣೆ ಮತ್ತು ಸಾಮಾಗ್ರಿಗಳನ್ನು ದೊರಕಿಸುವುದು.
- ಶೈಕ್ಷಣಿಕ ಸಮಸ್ಯೆಗಳಿಗೆ ತಜ್ಞರಿಂದ ಸಲಹೆ ಕೊಡಿಸುವುದು.
- ಈ ಸಂಘವು ಒಂದು ಆಧುನಿಕ ದೃಶ್ರವಣ ಕೊಣೆಯನ್ನು ನಿರ್ಮಿಸಿದೆ.

ಕಳೆದ ೮ ವರ್ಷಗಳಿಂದ ವಾರ್ಷಿಕವಾಗಿ ಈ ಎರಡು ಮುಖ್ಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸುತ್ತಿದೆ.

1. ದಂತ ವೈದ್ಯಕೀಯ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ MDS ರಾಜೀವ್ ಗಾಂಧೀ ವಿಶ್ವವಿದ್ಯಾನಿಲಯದ ಸಹಕಾರದಿಂದ 'Prologue' ಎಂಬ 'ಪರಿಚಯ' ಕಾರ್ಯಕ್ರಮ ಏರ್ಪಡಿಸುವುದು.
2. ಸರ್ಕಾರಿ  ದಂತ ವೈದ್ಯಕೀಯ ಕಾಲೇಜಿನ ಸಹಕಾರದಿಂದ ಕೃತಕ ದಂತ ಪಂಕ್ತಿ ಜೋಡನ ಶಿಬಿರಗಳನ್ನು ಏರ್ಪಡಿಸುವುದು.

ಚಿಕ್ಕನಾಯಕನಹಳ್ಳಿ, ಕನಕಪುರ, ಕೊಪ್ಪಳ, ಸಿಂಧನೂರು, ಹೊಸದುರ್ಗ ಮತ್ತು ತಿಪಟ್ಟೂರು ಸ್ಥಳಗಳಲ್ಲಿ ಕೃತಕ ದಂತ ಪಂಕ್ತಿ ಜೋಡನ ಶಿಬಿರವನ್ನು ಏರ್ಪಡಿಸಿ  ೨೦೦೦ಕ್ಕೂ ಹೆಚ್ಚು ಕೃತಕ ದಂತ ಪಂಕ್ತಿಗಳನ್ನು ವಿತರಿಸಲಾಗಿದೆ.ಈ ಕಾರ್ಯಕ್ರಮವು ಗ್ರಾಮೀಣ ಜನತೆಗೆ ತುಂಬಾ ಉಪಕಾರಿಯಾಗಿದೆ.

ಈ ಮಹಾವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಕೆಲವರು ಉಪಕುಲಪತಿ, ವೈದ್ಯಕೀಯ ಶಿಕ್ಷಣ ನಿರ್ದೇಶಕ, ಲೋಕಸೇವಾ ಆಯೋಗದ ಅಧ್ಯಕ್ಷ, ದಂತ ವೈದ್ಯಕೀಯ ಪರಿಷತ್ತಿನ ಉಪಾಧ್ಯಕ್ಷ, … ಮೊದಲಾದ ಉನ್ನತ್ತ ಉದ್ದೆಗಳನ್ನು ಅಲಂಕರಿಸಿ ಶ್ಲಾಘನೀಯ ಸೇವೆಯನ್ನು ಸಲ್ಲಿಸಿದ್ದಾರೆ.

ಮತ್ತೆ ಕೆಲವರು ಕೈಗಾರಿಕೆಯ ಉದ್ಯಮದಲ್ಲಿ ತೊಡಗಿ ದಂತ ಉಪಕರಣ, ಸಾಮಾಗ್ರಿ ಮತ್ತು ಸಲಕರಣೆಗಳನ್ನು ದೇಶದಲ್ಲಿ ಉತ್ಪಾದಿಸಿ, ದಂತ ವೃತ್ತಿಗೆ ಉಪಯುಕ್ತ ಸೇವೆಯನ್ನು ಸಲ್ಲಿಸಿರುತ್ತಾರೆ.

ಈ ಮಹಾವಿದ್ಯಾಲಯದ ವಜ್ರ ಮಹೋತ್ಸವವನ್ನು ವಿಜೃಂಬಣೆಯಿಂದ ಆಚರಿಸಲು ಸಮಾರಂಭ ಸಂಘಟನಾ ಸಮಿತಿಯು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

- ವೈಜ್ಞಾನಿಕ ಉಪನ್ಯಾಸಗಳು
- ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು
- ಕ್ರೀಡಾ ಸ್ಪರ್ಧೆಗಳು

ವಜ್ರ ಮಹೋತ್ಸವದ ಈ ಶುಭ ಸಮಾರಂಭದಲ್ಲಿ ಹಳೆ ವಿದ್ಯಾರ್ಥಿಗಳ ಸಂಘವು ಕಾಲೇಜಿನ ಅಭಿವೃದ್ಧಿ ಮತ್ತು ವಿದ್ಯಾರ್ಥಿಗಳ ಸಹಾಯಕ್ಕಾಗಿ ಒಂದು 'ರಕ್ಷಾಣಾ ನಿಧಿ' ಧತ್ತಿ (Benevolence Fund) ಅನ್ನು ಪ್ರಾರಂಭಿಸಿದೆ.

ಈ ಸಮಾರಂಭದಲ್ಲಿ ಭಾಗವಹಿಸಲು ಸುಮಾರು ೭೦೦ ಹಳೆಯ ವಿದ್ಯಾರ್ಥಿಗಳು ಪಾಲ್ಗೊಳ್ಳಲ್ಲಿದ್ದಾರೆ.

ವಜ್ರದ ಮಹೋತ್ಸವದ ಆಚರಣೆಗಳನ್ನು ಗುರುತಿಸಲು ರಾಜೀವ್ ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯವು ೪೧ ಲಕ್ಷಗಳ ಆರ್ಥಿಕ ಬೆಂಬಲವನ್ನು ನೀಡುವ ಮೂಲಕ ಲೇಸರ್ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಅನುಮತಿ ನೀಡಿದೆ.

ಸಮಾರಂಭದ ಉದ್ಘಾಟನೆಯನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಲಿದ್ದಾರೆ. ಶ್ರೀ.ಡಿ.ಕೆ ಶಿವಕುಮಾರ್, ನೀರಾವರಿ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು ಸ್ಮಾರಕ ಸಂಪುಟ ಬಿಡುಗಡೆ ಮಾಡಲಿದ್ದಾರೆ. ಶ್ರೀ ಜಮೀರ್ ಅಹ್ಮದ್, ಶಾಸನಸಭೆಯ ಸಚಿವ, ಕರ್ನಾಟಕ ಕ್ಯಾಬಿನೆಟ್ ಸಚಿವ ಮತ್ತು ಚಾಮರಾಜಪೇಟೆ ಕ್ಷೇತ್ರದ ಎಂಎಲ್ಎ.

ಡಾ|| ಸತೀಶ್ - ಮುಖ್ಯಸ್ಥ ಮತ್ತು ನಿರ್ದೇಶಕ

ವಜ್ರ ಮಹೋತ್ಸವದ ಸಮಿತಿ ಅಧ್ಯಕ್ಷರು

ಡಾ|| ಎಸ್.ಎಸ್. ಹಿರೇಮಠ್ - ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷರು

ಡಾ||ಸೂರ್ಯ ಪೊಡುವಾಳ್ – ಕಾರ್ಯದರ್ಶಿಗಳು

ಡಾ||ಶ್ರೀನಾಥ್ - ಖಜಾಂಚಿ

ಡಾ||ಮಂಜುನಾಥ್ ಪುರಾಣಿಕ್ - ವಜ್ರ ಮಹೋತ್ಸವ ಸಮಿತಿಯ ಕಾರ್ಯದರ್ಶಿ